ಅಸಲು ದಾವಾ ನಂಃ 68-2016

ಪಿ.ಡಬ್ಲ್ಯೂಃ 1

ದಿಃ 05-12-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ. ಎಸ್. ಜಿ. ವಾದಿ ಪರ ವಕೀಲರಿಂದ.

ಈ ಕೆಳಗಿನ ದಾಖಲಾತಿಗಳನ್ನು ನಾನು ಹಾಜರು ಮಾಡಿರುತ್ತೇನೆ.

ತಹಶೀಲ್ದಾರ ಶಿಗ್ಗಾಂವ ಇವರು ನೀಡಿರುವ ಆದೇಶ ದಿಃ 31-12-2007 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-6 ಎಂದು, ಸಹಾಯಕ ಕಮಿಷನರ ಉಪವಿಭಾಗ ಸವಣೂರ ಇವರು ನೀಡಿರುವ ಆದೇಶ ದಿಃ 14-11-2007 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-7 ಎಂದು, ಜಿಲ್ಲಾಧಿಕಾರಿಗಳು ಭೂ ಮಾಪನ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ ಭೂ ದಾಖಲೆಗಳ ಉಪ ನಿರ್ದೇಶಕರು ಹಾವೇರಿ ಇವರು ನೀಡಿರುವ ಆದೇಶ ದಿಃ 19-08-2008 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-8 ಎಂದು, ಜಿಲ್ಲಾಧಿಕಾರಿಗಳು ಹಾವೇರಿ ಇವರು ನೀಡಿರುವ ಆದೇಶ 06-08-2009 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-9 ಎಂದು, ಭೂ ನ್ಯಾಯ ಮಂಡಳಿ ಶಿಗ್ಗಾಂವ ಇವರು ನೀಡಿರುವ ಆದೇಶ ದಿಃ 16-12-1978 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-10 ಎಂದು, ಹಿಸ್ಸಾ ನಮೂನೆ ನಂಃ 4 ರ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-11 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-12 ಎಂದು, 1980 ರಿಂದ 1985 ರ ಕೈ ಬರಹ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಹಿ/- 05-12-2019

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ದಿನಾಂಕಃ 22.02.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟಿ ಸವಾಲುಃ-</u> ಪ್ರತಿವಾದಿ ಪರ ಶ್ರೀ ಬಿಪಿಜಿ ವಕೀಲರಿಂದ

ದಾವಾ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ದಾವೆಯನ್ನು ನಾನೊಬ್ಬನೇ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸರ್ವೇ ನಂ. 30ಃ1. ಇದರ ಚಕ್ಕಬಂದಿಯಾಗಿ ಪೂ-ಕ್ಕೆ ಹೊನ್ನಪ್ಪನವರ ಆಸ್ತಿ, ಪ-ಕ್ಕೆ ನನ್ನ ಆಸ್ತಿ, ಉ-ಕ್ಕೆ ತಟ್ಟಿಯವರ ಹೊಲ, ದ-ಕ್ಕೆ ನನ್ನ ಹೊಲ ಇರುತ್ತದೆ. ದಾವಾ ಆಸ್ತಿಯು ನನಗೆ ಹಿರಿಯ ಮುಖಾಂತರ ಬಂತು. ಒಟ್ಟು ಆಸ್ತಿ 8 ಎಕರೆ 8 ಗುಂಟೆ ಆಸ್ತಿ ಇತ್ತು, ಅದನ್ನು ನಾವು ಸಹೋದರರು ಹಿಸ್ಸೆ ಮಾಡಿಕೊಂಡಿರುತ್ತೇವೆ. 25 ವರ್ಷಗಳ ಹಿಂದೆ ನಾವು ಹಿಸ್ಸೆ ಮಾಡಿಕೊಂಡೆವು. ವಿಭಾಗದ ಪೈಕಿ ಸರ್ವೇ ನಂ. 30ಃ1 ರ ಆಸ್ತಿ 4 ಎಕರೆ 2 ಗುಂಟೆ ನನಗೆ ಬಂತು. ನನ್ನ ಅಣ್ಣನಿಗೆ ಸರ್ವೇ ನಂ. 30ಃ2 ರಲ್ಲಿ 4 ಎಕರೆ 2 ಗುಂಟೆ ಆಸ್ತಿಯು ಬಂದಿರುತ್ತದೆ. ನಾವು 25-30 ವರ್ಷಗಳಿಂದ ವಿಭಾಗವಾದ ನಂತರ ಪ್ರತ್ಯೇಕ ಸಾಗು ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ದಾವೆಯನ್ನು ಸಲ್ಲಿಸುವ ಮೊದಲು ನಾನು

ದಾಖಲೆಗಳನ್ನು ಪರಿಶೀಲಿಸಿದ್ದೆ. ದಾಖಲೆಗಳು ಸರ್ವೇ ನಂ.30ಃ1ಕ್ಕೆ ಸಂಬಂಧಪಟ್ಟವು ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.